ಶ್ರೀ ಎಚ್.ಡಿ. ದೇವೇಗೌಡ —ಅಧ್ಯಕ್ಷರೇ, ಮಾನ್ಯ ಸದಸ್ಯರಂ, ೧೪ ಯೋಜನೆಗಳನ್ನು ಸರ್ವೆ ಮಾಡಿದ್ದಾರೆ ೯ಕ್ಕೆ ಫಿಸಿಬಿಲಿಟಿ ಇದೆ ಎಂದು ಹೇಳಿದ್ದಾರೆ. ಆದರೆ ನನಗೆ ಬಂದಿರತಕ್ಕಂತಹ ಮಾಹಿತಿಯನ್ನು ತಿಳಿಸಿರುತ್ತೇನೆ. ಸದಸ್ಯರು ಹೇಳಿದ ವಿಷಯವನ್ನು ನಾನು ತಿಳಿದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೇನೆ. ಹಾಲಿ ಅಲ್ಲಿ ಮೂರು ಕೆಲಸಗಳು ನಡೆಯುತ್ತಾ ಇವೆ. Lift Irrigation Scheme at Nandiharlahalli, Ekaleshwarpur and another schemer at a cost of 83 lakhs. ಮೂರು ಸ್ಕೀಮಿನ ಕೆಲಸ ನಡೆಯುತ್ತಾ ಇದೆ. ೪೩.೮೩ ಲಕ್ಷ ರೂಪಾಯಿಗಳನ್ನು ಈಗಾಗಲೇ ನಾವು ಖರ್ಚು ಮಾಡಿದ್ದೇವೆ. ಈ ವರ್ಷ ೫೦.೫೦ ಲಕ್ಷ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರೊವಿಜನ್ ಮಾಡಿದ್ದೇವೆ. ಸದಸ್ಯರು ಹೇಳಿದಂತೆ ಆಪರ ತಾಲ್ಲೂಕಿಗೆ ಮಾತ್ರ ವಿಶೇಷವಾಗಿ ಮಾಸ್ಟರ್ ಪ್ಲಾನ್ ಮಾಡುವುದು ಕಷ್ಟವಾಗುತ್ತದೆ. ಆದರೆ ನೀವು ಹೇಳಿದ ಹಾಗೆ ಯಾವುದಾದರೂ ಒಂದೆರಡು ಕೆಲಸಗಳನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವೇ ಎಂಬ ವಿಷಯವನ್ನು ಕೇಳಿದ್ದೀರಿ ಅದು ಸರಕಾರದ ಸಂಪನ್ಮೂಲಗಳನ್ನು ಅವಲಂಬಿಸಿರುವಂಥಾದ್ದು ಆಗಿದೆ. ಅದರ ಬಗ್ಗೆ ಯೋಚನೆ ಮಾಡೋಣ.

ಶ್ರೀ ಕೆ.ಬಿ. ಕೋಳಿವಾಡ್.—ಅಧ್ಯಕ್ಷರೇ, ಎರಡು ಮೂರು ಕೆಲಸಗಳನ್ನು ತೆಗೆದುಕೊಳ್ಳುವ ಬದಲು, ಹೆಚ್ಚು ನೀರಾವರಿ ಆಗತಕ್ಕಂತಹ ಒಂದು ಮಧ್ಯಮ ನೀರಾವರಿ ಯೋಜನೆಯನ್ನು ಸರಕಾರ ದವರು ಈ ವರ್ಷವೇ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ.—ವಿವಿಧ ಕೆಲಸಗಳಿಗೆ ಎಷ್ಟು ಹಣ ಇಡಬೇಕೆಂದು ಹೇಳಿದರ ಬಗ್ಗೆ ಈಗಾಗಲೇ ಹೇಳಿದ್ದೇನೆ. ಹೊಸ ಕೆಲಸಗಳಿಗಾಗಿ ಹಣ ಇಟ್ಟಿಲ್ಲ. ಮುಂದೆ ಸಪ್ಲಿಮೆಂಟರಿ ಬಿಲ್‌ನಲ್ಲಿ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡೋಣ ಎಂದು ಹೇಳಲಿಚ್ಚಿಸುತ್ತೇನೆ.

ಕೃಷ್ಣರಾಜ ನಗರದ ರೈಲ್ವೆ ನಿಲ್ದಾಣದ ಬಳಿ ಸುರಂಗ ಸೇತುವೆಯನ್ನು ವಿಶಾಲಗೊಳಿಸುವುದರ ಬಗ್ಗೆ

೮೮೯. ಶ್ರೀ ಎಸ್. ನಂಜಪ್ಪ (ಕೆ. ಆರ್. ನಗರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕೃಷ್ಣರಾಜನಗರ ರೈಲ್ವೆ ನಿಲ್ದಾಣದ ಬಳಿ ಹಾಸನ-ಮೈಸೂರು ರಸ್ತೆ ಹಾದುಹೋಗುವ ರೈಲ್ವೆ ಸುರಂಗ ಸೇತುವೆ ವಾಹನಗಳ ಮೇಲ್ಬಾಗಕ್ಕೆ ತಗುಲಿ ಸಂಚಾರಕ್ಕೆ ಅಡ್ಡಿಯಾಗುವುದೆಂದು ಎರಡು ತಿಂಗಳಿಂದ ಈ ಮಾರ್ಗದಲ್ಲಿ ಸಂಚಾರಕ್ಕೆ ತೊಂದರೆಯಾಗಿರುವ ವಿಚಾರ ಸರ್ಕಾರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸದರಿ ಸೇತುವೆಯನ್ನು ವಿಶಾಲಗೊಳಿಸಲು ಕೈಗೊಂಡಿರುವ ಕ್ರಮಗಳೇನು ?

ಇ) ಮೇಲಿನ ಸೇತುವೆ ದಾರಿಯನ್ನು ಬದಲಿಸಿ ಕೆ ಆರ್. ನಗರ ಕಂಟೇನಹಳ್ಳಿ ಬಳಿ ಇರುವ ಉಪ ರಸ್ತೆಯನ್ನು ದುರಸ್ತಿಗೊಳಿಸಿ ಸಂಚಾರ ಯೋಗ್ಯ ಮಾಡುವುದರಿಂದ ಈ ತೊಂದರೆ ತಪ್ಪಿಸಲು ಸಾಧ್ಯವಾಗುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿ, ನೀರಾವರಿ ಮಂತ್ರಿಗಳು).—

ಅ) ಬಂದಿದೆ.

ಆ) ರೈಲ್ವೆ ಇಲಾಖೆಯೊಂದಿಗೆ ಸಂಪರ್ಕಿಸಲಾಗುತ್ತಿದೆ.

ಇ) ಸಾಧ್ಯ.

ಶ್ರೀ ಎಸ್. ನಂಜಪ್ಪ.—ಸನ್ಮಾನ್ಯ ಅಧ್ಯಕ್ಷರೇ ರೈಲ್ವೆ ಇಲಾಖೆಯವರು ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿ ಸೇತುವೆಯನ್ನು ಮಾಡಿದ್ದಾರೆ. ಈ ವಿಷಯವನ್ನು ಲೋಕೋಪಯೋಗಿ ಇಲಾಖೆಯವರಿಗೂ ಕೂಡ ಅವರು ತಿಳಿಸಿಲ್ಲ. ಮತ್ತು ಸೇತುವೆಯ ದಾರಿಯಲ್ಲಿ ಒಂದು ಅಡ್ಡಗೋಡೆಯನ್ನು ಸಹ ಹಾಕಿದ್ದಾರೆ ಈ ಬಗ್ಗೆ ಲೋಕೋಪಯೋಗಿ ಇಲಾಖೆಯಿಂದ ಏನಾದರೂ ಪ್ರತಿಭಟನೆಯನ್ನು ಸಲ್ಲಿಸಿದ್ದೀರಾ ? ರೈಲ್ವೆ ಇಲಾಖೆಯವರು ಮಾಡಿರುವ ಸುರಂಗ ಸೇತುವೆಯನ್ನು ಕೆಳಗಿಳಿಸಿ ವಾಹನಗಳ ಸಂಚಾರಕ್ಕೆ ಯೋಗ್ಯ ಮಾಡಿಕೊಡುವ ಉದ್ದೇಶವೇನಾದರೂ ಸರ್ಕಾರದಲ್ಲಿ ಇದೆಯೆ ?

ಶ್ರೀ ಹೆಚ್.ಡಿ. ದೇವೇಗೌಡ.-ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಎರಡೂ ಕೆಲಸಗಳು ಕಷ್ಟ ಸಾಧ್ಯ. ಈಗಿರತಕ್ಕಂಥ ಸುರಂಗ ಸೇತುವೆಯನ್ನು ಎತ್ತರಿಸುವುದಕ್ಕೂ ಆಗುವುದಿಲ್ಲ, ಇಲ್ಲ ಕಡಿಮೆ ಮಾಡಿ ತಗ್ಗಿಸುವುದಕ್ಕೂ ಆಗುವುದಿಲ್ಲ. ಕಾರಣವೇನೆಂದರೆ ಆ ಸೇತುವೆಯ ಪಕ್ಕದಲ್ಲಿಯೇ ಒಂದು ನದಿ ಇದೆ. ಅಲ್ಲಿ ನೀರಿನ ಪ್ರಮಾಣ ಜಾಸ್ತಿಯಾದರೆ ಫ್ಲಡ್ಸ್ ಬರುತ್ತದೆ. ಇಂತಹ ಸಂದರ್ಭದಲ್ಲಿ ನಾವು ಇನ್ನು ತಗ್ಗು ಮಾಡಿದರೆ ಅಲ್ಲಿ ನೀರು ತುಂಬಿಕೊಂಡು ಇನ್ನೂ ಅವ್ಯವಸ್ಥೆಯಾಗುತ್ತದೆ. ಈ ಒಂದು ಸನ್ನಿವೇಶದಲ್ಲಿ ರೈಲ್ವೆ ಇಲಾಖೆಯವರು ಕೂಡ ಒಪ್ಪಿಕೊಳ್ಳುವುದಿಲ್ಲ. ಈಗಿರುವಂತಹ ರೀತಿಯಲ್ಲಿಯೇ ಸಂಚಾರಕ್ಕೆ ಯೋಗ್ಯವಾಗಿ ಮಾಡಲಾಗುತ್ತದೆ.

ಶ್ರೀ ಬಿ. ಎ. ಜೀವಿಜಯ ಮಾನ್ಯ ಅರಣ್ಯ ರಾಜ್ಯ ಸಚಿವರು).—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆ ಸಂಬರು ೩೮೫ (೯೧೯) ನೇರವಾಗಿ ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದು. ಆದರೂಕೂಡ ನಾನು ಈ ಪ್ರಶ್ನೆಗೆ ಉತ್ತರ ಹೇಳುವುದಾದರೆ ಸದ್ಯದ ಪರಿಸ್ಥಿತಿಯಲ್ಲಿ ಅಂತಹ ಯಾವುದೇ ಯೋಚನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

MR. SPEAKER.—Question carried over.

ಬೆಳಗಾಂ ಜಿಲ್ಲೆ ಹುಕ್ಕೇರಿ ತಾಲ್ಲೂಕು ಹತ್ತರಗಿ ಬಳಿ ಇರುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ರ ಮೇಲಿರುವ ಸೇತುವೆಯಲ್ಲಿ ವಸೂಲಿ ಮಾಡಲಾಗುತ್ತಿರುವ ವಾಹನ ತೆರಿಗೆ ಕುರಿತು

೯೨೭. (ಬಿ) ಶ್ರೀ ಕಲ್ಲಪ್ಪ ಬಿ ಮಾಗೆಣ್ಣವರ್ ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು ದಯವಿಟ್ಟು ಉತ್ತರಿಸುವರೆ?

(ಅ) ಹುಕ್ಕೇರಿ ತಾಲ್ಲೂಕು ಹತ್ತರಗಿಯ ಸಮೀಪದಲ್ಲಿ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೪ ರಲ್ಲಿರುವ ಸೇತುವೆಯ ಮೇಲೆ ಓಡಾಡುವ ವಿವಿಧ ರೀತಿಯ ವಾಹನಗಳಿಂದ ವಸೂಲಿ ಮಾಡಲಾಗುತ್ತಿರುವ ತೆರಿಗೆಯು ಯಾವ ರೀತಿಯದು?

(ಆ) ಇದುವರೆಗೆ ವಸೂಲಿ ಮಾಡಲಾಗಿರುವ ಮೊತ್ತ ಮತ್ತು ಆ ಹಣವನ್ನು ಎಲ್ಲಿ ಇರಿಸಾಲು ಮಾಡಲಾಗಿದೆ?

(ಇ) ಈ ಸೇತುವೆಯ ನಿರ್ಮಾಣಕ್ಕಾಗಿ ಖರ್ಚು ಮಾಡಿರುವ ಹಣ ಎಷ್ಟು?

(ಈ) ಎಲ್ಲಿಯವರೆಗೆ ವಾಹನ ತೆರಿಗೆಯ ವಸೂಲಿ ಮುಂದುವರಿಸಲಾಗುವುದು?

ಶ್ರೀ ಹೆಚ್. ಡಿ. ದೇವೇಗೌಡ್ರ(ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು) ಉತ್ತರಿಸುವರು.

(ಅ) ಈ ಸೇತುವೆಯಲ್ಲಿ ವಸೂಲಿ ಮಾಡಲಾಗುತ್ತಿರುವ ತೆರಿಗೆ ರಾಷ್ಟ್ರೀಯ ಹೆದ್ದಾರಿಗಳ ಶಾಶ್ವತ ಸೇತುವೆಗಳ ಉಪಯೋಗ ಶುಲ್ಕ.

(ಆ) ದಿನಾಂಕ ೨೬-೭-೧೯೮೫ರವರೆಗೆ ವಸೂಲಿ ಮಾಡಲಾದ ಹಣ ೧,೯೭,೦೪,೩೧೫-೦೦ ರೂಗಳು. ಪ್ರತಿ ವಾರದಲ್ಲಿ ವಸೂಲಿ ಮಾಡಲಾದ ಹಣವನ್ನು ಡಿಮಾಂಡ್ ಡ್ರಾಫ್ಟ್ ರೂಪದಲ್ಲಿ ವೇತನ ಮತ್ತು ಲೆಕ್ಕಾಧಿಕಾರಿ (ರಾಷ್ಟ್ರೀಯ ಹೆದ್ದಾರಿಗಳು) (Pay and Accounts Officer (National Highways) ಸಾರಿಗೆ ಹಾಗೂ ನೌಕಾಯನ ಸಚಿವಾಲಯ (ರಸ್ತೆ ಶಾಖೆ) ನವದೆಹಲಿ ಇವರಿಗೆ ಇರಿಸಾಲು ಮಾಡಲಾಗುತ್ತಿದೆ.

(ಇ) ಈ ಸೇತುವೆಯ ನಿರ್ಮಾಣಕ್ಕೆ ತಗಲಿರುವ ವೆಚ್ಚ ೧,೩೨,೧೦, ೮೦೩-೦೦ ರೂ.ಗಳು ಸೇತುವೆ ಮತ್ತು ಅದರ ಕೂಡು ಹಾದಿಯ ನಿರ್ಮಾಣ ವೆಚ್ಚ ಸೇರಿ).

(ಈ) ಸುಮಾರು ೧೯೮೯ನೇ ಇಸವಿ ಆಕ್ಟೋಬರ್ ಮಾಹೆಯ ಕೊನೆಯವರೆಗೆ.